

◆ **ನಿಮ್ಮ ಸಾಹಿತ್ಯದ ಓದು, ಹಿನ್ನೆಲೆ ಶುರುವಾದದ್ದು ಎಲ್ಲಿಂದ?**

ಆಗೆಲ್ಲ ಆರಾಣೆಗೆ 'ಚಂದಮಾಮ' ಸಿಕ್ತಾ ಇತ್ತು. ಪ್ರೈಮರಿಯಲ್ಲಿದ್ದಾಗ ನನಗೆ ಇದನ್ನು ಓದೋ ಹುಚ್ಚು. ನಾಗಲಕ್ಷ್ಮಮ್ಮ ಅನ್ನೋ ಟೀಚರ್ ಒಬ್ಬರಿದ್ದರು. ಅವರು ತರಗತಿ ಪಾಠಗಳನ್ನೆಲ್ಲ ಬೇಗಬೇಗ ಮಾಡಿ ಮುಗಿಸಿ 'ಚಂದಮಾಮ'ದ ಕತೆಗಳನ್ನ ಕ್ಲಾಸ್‌ನಲ್ಲಿ ಓದಿ ಹೇಳ್ತಾ ಇದ್ರು. ನನ್ನ ತಾಯಿಯ ಮಲತಾಯಿ ತುಂಬಾ ಕತೆಗಳನ್ನ ಹೇಳ್ತಾ ಇದ್ರು. ಇವೆಲ್ಲ ನನ್ನ ಮೇಲೆ ಪ್ರಭಾವ ಬೀರಿದೆ. ಆ ಕಾಲದಲ್ಲೇ, ಅಂದ್ರೆ 1954-55ರಲ್ಲಿ ನಾನು ಹೈಸ್ಕೂಲಿನಲ್ಲಿದ್ದಾಗ ನಮ್ಮ ತಂದೆ ತಿಂಗಳಿಗೆ ಹತ್ತು ರೂಪಾಯಿ ಪಾಕೆಟ್ ಮನಿ ಅಂತ ಕೊಡ್ತಾ ಇದ್ರು. ಈ ದುಡ್ಡನ್ನೆಲ್ಲ ಪುಸ್ತಕ ಕೊಳ್ಳೋಕೆ ಖರ್ಚು ಮಾಡ್ತಿದ್ದೆ. ಹಾಸನದ ಪೇಟೆಬೀದಿನಲ್ಲಿ 'ಶಿವರಾಮಯ್ಯ ಅಂಡ್ ಸನ್ಸ್', 'ಮಹಾವೀರ ಬುಕ್ ಡಿಪೋ' ಅಂಗಡಿಯಲ್ಲಿ ಸಾಹಿತ್ಯದ ಪುಸ್ತಕಗಳು ಸಿಕ್ತಾ ಇದ್ವು. ಅ.ನ.ಕೃ., ತರಾಸು, ತ್ರಿವೇಣಿ, ಬಸವರಾಜ ಕಟ್ಟೀಮನಿ ಮುಂತಾದವರ ಪುಸ್ತಕಗಳನ್ನ ನಾನು ಇಲ್ಲಿ ಕೊಂಡುಕೊಂಡು ಓದಿದ್ದು. ಅ.ನ.ಕೃ. ಅವರ ಪುಸ್ತಕಗಳ ಮುನ್ನುಡಿ ನನ್ನ ಪ್ರಭಾವಿಸಿತ್ತು, ಅಲ್ಲಿ ಅವರು ಪ್ರಸ್ತಾಪ ಮಾಡ್ತಾ ಇದ್ದ ಇಂಗ್ಲಿಷ್ ಲೇಖಕರ ಪುಸ್ತಕಗಳನ್ನ ಬೆಂಗಳೂರಿಗೆ ಹೋದಾಗ ಕೊಂಡು ಓದೋಕೆ ಶುರುಮಾಡಿದೆ.